

# ಯಶವಂತ ಚಿತ್ತಾಲ

(1928-2014)

ಆಧುನಿಕ ಕನ್ನಡ ಕಥಾಸಾಹಿತ್ಯದ ಮಹತ್ವದ ಲೇಖಕ ಯಶವಂತ ಚಿತ್ತಾಲ. ನವ್ಯ ಸಾಹಿತ್ಯದ ಮೇರುಕತೆಗಾರರಲ್ಲಿ ಅವರೂ ಒಬ್ಬರು. ಚಿತ್ತಾಲರು ಮೊದಲಿಗೆ ಬರೆಯಲು ಶುರುಮಾಡಿದ್ದು ಕತೆಗಳನ್ನು. ಅವರ ಮೊದಲ ಕತೆ 'ಬೊಮ್ಮಿಯ ಹುಲ್ಲು ಹೊರೆ'. ಅದು ಕನ್ನಡದ ಮಹತ್ವದ ಕತೆ ಕೂಡ. ಉಪಜೀವನಕ್ಕಾಗಿ ಮುಂಬೈ ಸೇರಿದ ಚಿತ್ತಾಲರು ತಮ್ಮ ಬಹುಪಾಲು ಕತೆ ಕಾದಂಬರಿಗಳನ್ನು ಕನ್ನಡ ನಾಡಿನ ಹೊರಗಿದ್ದೇ ಬರೆದಿದ್ದಾರೆ. ಹುಟ್ಟೂರು ಉತ್ತರ ಕನ್ನಡದ ಹನೇಹಳ್ಳಿ, ಕರ್ಮಭೂಮಿ ಮುಂಬೈ ದಟ್ಟವಾಗಿ ಅವರ ಕತೆ, ಕಾದಂಬರಿಗಳಲ್ಲಿ ಮೂಡಿವೆ.

ಕತೆಗಳ ಜೊತೆಜೊತೆಗೇ ಕಾದಂಬರಿಗಳನ್ನು ಬರೆದ ಚಿತ್ತಾಲರ ಪ್ರಮುಖ ಕಾದಂಬರಿ 'ಶಿಕಾರಿ'. ಅದು ಆಧುನಿಕ ಜಗತ್ತಿನ ಕ್ರೌರ್ಯವನ್ನು ತಣ್ಣಗೆ ಬಿಂಬಿಸುವ ಕೃತಿ. ಪತ್ತೆದಾರಿ ಶೈಲಿಯ ಆ ಕಾದಂಬರಿ ಕನ್ನಡ ಕಾದಂಬರಿಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. 'ಚಿತ್ತಾಲತನ'ದ ಮುದ್ರೆ ಇರುವ ಅವರ ಬರವಣಿಗೆ ಕತೆ ಕಾದಂಬರಿಗಳಿಗೆ ಮಾತ್ರವಲ್ಲ, ಪ್ರಬಂಧ, ಲಬಸಾ(ಲಯಬದ್ಧ ಸಾಲುಗಳು) ಕವಿತೆಗಳಿಗೂ ವಿಸ್ತರಿಸಿದೆ. ಕತೆಯಂತಹ ಪ್ರಬಂಧಗಳು ಇಲ್ಲವೇ ಪ್ರಬಂಧದಂತಹ ಕತೆಗಳು ಅವರ ವಿಶಿಷ್ಟ ಪ್ರಯೋಗಗಳಾಗಿವೆ. 'ಸಾಹಿತ್ಯ, ಸೃಜನಶೀಲತೆ ಮತ್ತು ನಾನು', 'ಸಾಹಿತ್ಯದ ಸಪ್ತ ದಾತುಗಳು' ಮತ್ತು 'ಅಂತಃಕರಣ' ಅವರ ಪ್ರಬಂಧ ಸಂಕಲನಗಳಾಗಿವೆ.

'ಸಂದರ್ಶನ', 'ಆಬೋಲಿನ', 'ಆಟ', 'ಕತೆಯಾದಳು ಹುಡುಗಿ', 'ಬೇನ್ಯಾ', 'ಸಿದ್ಧಾರ್ಥ', 'ಕುಮಟೆಗೆ ಬಂದಾ ಕಿಂದರಜೋಗಿ', 'ಓಡಿ ಹೋದಾ ಮುಟ್ಟಿ ಬಂದಾ'– ಅವರ ಪ್ರಮುಖ ಕಥಾಸಂಕಲನಗಳು. 'ಮೂರು ದಾರಿಗಳು', 'ಛೇದ', 'ಪುರುಷೋತ್ತಮ', 'ಕೇಂದ್ರ ವೃತ್ತಾಂತ'– ಅವರ ಕಾದಂಬರಿಗಳಾಗಿವೆ.

ಹನೇಹಳ್ಳಿ, ಕುಮಟೆ, ಧಾರವಾಡ, ಮುಂಬಯಿಗಳಲ್ಲಿ ಶಿಕ್ಷಣ ಪಡೆದ ಅವರು ತಮ್ಮ ಉಚ್ಚ ಶಿಕ್ಷಣವನ್ನು ಅಮೆರಿಕದ ನ್ಯೂಜರ್ಸಿಯಲ್ಲಿ ಪಡೆದರು. ರಾಸಾಯನಿಕ ತಂತ್ರವಿಜ್ಞಾನದಲ್ಲಿ ಅವರ ಉನ್ನತ ಶಿಕ್ಷಣ ಆಯಿತು. ಇದೇ ತಂತ್ರವಿಜ್ಞಾನದ ಶಾಖೆಯಾದ ಪೊಲಿಮರ್ ಟೆಕ್ನಾಲಜಿಯಲ್ಲಿ ವಿಶೇಷ ಪರಿಣತಿ, ಮನ್ನಣೆಗಳನ್ನು ಅವರು ಪಡೆದರು. ಯಶವಂತರ ತಂದೆ ವಿಠೋಬ, ತಾಯಿ ರುಕ್ಮಿಣಿ. ಕನ್ನಡದ ಪ್ರಸಿದ್ಧ ಕವಿ ದಾಮೋದರ ಚಿತ್ತಾಲ ಅವರ ಅಣ್ಣ.

ಬರುವುದು ಬೇಡವೆಂದರು. ಜನವಸತಿ ದಟ್ಟವಾದ ಮುಂಬಯಿಯ ಹಲವು ಕೇರಿಗಳಲ್ಲಿ ಒಮ್ಮೆ ಎಳೆಯ ಪ್ರಾಯದ ಮಕ್ಕಳನ್ನು ಕಳವು ಮಾಡುವ ಹಾವಳಿಯೇ ಎದ್ದಿತ್ತು. ಕಣ್ಣುಗಳನ್ನು ಕಿತ್ತೋ ಕೈಕಾಲುಗಳನ್ನು ಕಡಿದೋ ಭಿಕ್ಷೆ ಬೇಡಲು ಹಚ್ಚುತ್ತಾರೆ; ಹೆಣ್ಣು ಮಕ್ಕಳಾದರೆ ಪ್ರಾಯಕ್ಕೆ ಬಂದಕೂಡಲೇ ಸೂಳೆಗಾರಿಕೆಗೆ ಉಪಯೋಗಿಸುತ್ತಾರೆ ಎಂಬಂಥ ದುಷ್ಟ ಗಾಳಿ ಸುದ್ದಿ ತಂದೆತಾಯಿಗಳ ನಿದ್ದೆಗೇಡಿಗೆ ಕಾರಣವಾಗಿತ್ತು. ಕಣ್ಣ ಮುಂದೆಯೇ ಘಟಿಸಿದ ಸಾವನ್ನು ಕೂಡ